# ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQs)

**(ಸೂಚನೆ : ಪದೇ ಪದೇ ಕೇಳಲಾಗುವ ಪ್ರಶ್ನೆಗಳ (FAQ) ಮೂಲಕ ಈ ಕೆಳಗಿನಂತೆ ಒದಗಿಸಿರುವ ಉತ್ತರಗಳು SSC ಬಿಡುಗಡೆ ಮಾಡಿದ ಪರೀಕ್ಷಾ ಸೂಚನೆಗಳೊಂದಿಗೆ ಹೊಂದಾಣಿಕೆ ಆಗದಿದ್ದರೆ, ನಂತರದವುಗಳು ಚಾಲ್ತಿಯಲ್ಲಿರುತ್ತವೆ. ಆದ್ದರಿಂದ, ನವೀಕರಿಸಿದ ಮಾಹಿತಿಗಾಗಿ ಎಸ್‌ಎಸ್‌ಸಿ ಬಿಡುಗಡೆ ಮಾಡಿದ ಸಂಬಂಧಿತ ಪರೀಕ್ಷೆಯ ಸೂಚನೆಗಳನ್ನು ಪರಿಶೀಲಿಸಲು ಅಭ್ಯರ್ಥಿಗಳಿಗೆ ಸೂಚಿಸಲಾಗಿದೆ.)**

## (A) ಎಸ್.ಎಸ್.ಸಿ. (SSC) ಬಳಕೆದಾರ ಖಾತೆಯ ರಚನೆ ಮತ್ತು ಸಿಬ್ಬಂದಿ ಆಯ್ಕೆ ಆಯೋಗವು ನಡೆಸುವ ಮುಕ್ತ ಪರೀಕ್ಷೆಗಳ ಕುರಿತು ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQs).

### 1. ಒಂದು ಬಾರಿ ನೋಂದಣಿ (OTR) ಸಂಬಂಧಿಸಿದ ಪ್ರಶ್ನೆಗಳು:

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1. | ಒಂದು ಬಾರಿ ನೋಂದಣಿ (OTR) ಎಂದರೇನು? | ಸಿಬ್ಬಂದಿ ಆಯ್ಕೆ ಆಯೋಗವು ನಡೆಸುವ ವಿವಿಧ ಪರೀಕ್ಷೆಗಳಿಗೆ ಅರ್ಜಿಗಳನ್ನು ಆನ್‌ಲೈನ್ ಮೋಡ್‌ನಲ್ಲಿ ಎಸ್.ಎಸ್.ಸಿ. ಪ್ರಧಾನ ಕಚೇರಿಯ ಅಧಿಕೃತ ಜಾಲತಾಣದಲ್ಲಿ ಮಾತ್ರ ಸಲ್ಲಿಸಬೇಕಾಗುತ್ತದೆ, ಅಂದರೆ, https://ssc.gov.in<br>ಈ ರೀತಿ, ಪರೀಕ್ಷೆಗೆ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಪ್ರಕ್ರಿಯೆಯು ಎರಡು ಭಾಗಗಳನ್ನು ಒಳಗೊಂಡಿದೆ:<br>I. ಒಂದು ಬಾರಿ ನೋಂದಣಿ (OTR)<br>II. ಸಂಬಂಧಪಟ್ಟ ಪರೀಕ್ಷೆಗಾಗಿ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವುದು. ಆದ್ದರಿಂದ, ಅಭ್ಯರ್ಥಿಗಳು ಅಭ್ಯರ್ಥಿಯ ಮೂಲ ಮಾಹಿತಿಯನ್ನು ನಮೂದಿಸುವ ಮೂಲಕ ಒಂದು-ಬಾರಿ ನೋಂದಣಿಯನ್ನು ಮಾಡಬೇಕಾಗುತ್ತದೆ. ಹೆಚ್ಚಿನ ವಿವರಗಳಿಗಾಗಿ ಭೇಟಿ ನೀಡಿ:- https://ssc.gov.in |
| 2 | ಒಂದು ಬಾರಿ ನೋಂದಣಿ ಸಮಯದಲ್ಲಿ ನಮೂದಿಸಿದ ಮೂಲಭೂತ ಮಾಹಿತಿಯನ್ನು ಉಳಿಸಲಾಗುತ್ತದೆಯೇ ಮತ್ತು ಭವಿಷ್ಯದ ಪರೀಕ್ಷೆಗಳಲ್ಲಿ ಅದನ್ನು ಬಳಸಬಹುದೇ? | ಹೌದು. ಒಂದು-ಬಾರಿ ನೋಂದಣಿಯು ಅಭ್ಯರ್ಥಿಗೆ ಬಳಕೆದಾರ ಖಾತೆಯನ್ನು ರಚಿಸುತ್ತದೆ ಮತ್ತು ನೋಂದಣಿ ಸಂಖ್ಯೆ ಮತ್ತು ಪಾಸ್‌ವರ್ಡ್ ಅನ್ನು ರಚಿಸಲಾಗುತ್ತದೆ. ಅಭ್ಯರ್ಥಿಯು ನೋಂದಣಿ ಸಂಖ್ಯೆ ಮತ್ತು ಪಾಸ್‌ವರ್ಡ್ ಮೂಲಕ ಲಾಗಿನ್ ಮಾಡಬಹುದು ಮತ್ತು ಭವಿಷ್ಯದ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಬಹುದು, ಇದಕ್ಕಾಗಿ ಮೂಲ ಮಾಹಿತಿಯನ್ನು ಸ್ವಯಂ-ತುಂಬಿಸಲಾಗುತ್ತದೆ. |
| 3 | ನಾನು ನೋಂದಣಿ ಸಂಖ್ಯೆ ಮರೆತಿದ್ದೇನೆ. ಅಥವಾ ಒಂದು ಬಾರಿ ನೋಂದಣಿ ಸಮಯದಲ್ಲಿ ಪಾಸ್ವರ್ಡ್ ಸ್ವೀಕರಿಸಲಾಗಿದೆ. ಮತ್ತೆ ಪಾಸ್ವರ್ಡ್ ಅನ್ನು ಹೇಗೆ ಮರು ಹೊಂದಿಸಬಹುದು? | ಎಸ್‌ಎಸ್‌ಸಿ ಜಾಲತಾಣ https://ssc.gov.in ನಲ್ಲಿ ಲಭ್ಯವಿರುವ "ಪಾಸ್‌ವರ್ಡ್ ಮರೆತುಹೋಗಿದೆ" ಲಿಂಕ್ ಅನ್ನು ಕ್ಲಿಕ್ ಮಾಡುವ ಮೂಲಕ ಅಭ್ಯರ್ಥಿಯು ತನ್ನ ಪಾಸ್‌ವರ್ಡ್ ಅನ್ನು ಮರುಹೊಂದಿಸಬಹುದು. |

| | | |
|---|---|---|
| 4 | ನಾನು ಒಂದು–ಬಾರಿ ನೋಂದಣಿ (OTR) ನಲ್ಲಿ ಸಮಸ್ಯೆಗಳನ್ನು ಎದುರಿಸು ತ್ತಿದ್ದೇನೆ. ಹಾಗಾದರೆ ನಾನು ಯಾರನ್ನು ಸಂಪರ್ಕಿಸಬೇಕು? | ನೀವು SSC(HQ) ಅನ್ನು ಟೋಲ್ ಫ್ರೀ ಸಂಖ್ಯೆ **1800 309 3063** ಮೂಲಕ ಸಂಪರ್ಕಿಸಬಹುದು (ಸೋಮವಾರದಿಂದ ಶುಕ್ರವಾರದವರೆಗೆ ಬೆಳಗ್ಗೆ 9–30 ರಿಂದ ಸಂಜೆ 6–00) |
| 5 | ಒಂದು ಬಾರಿ ನೋಂದಣಿ ಸಮಯದಲ್ಲಿ ನಮೂದಿಸಲಾದ ಮೂಲ ಮಾಹಿತಿಯಲ್ಲಿ ನಾನು ತಿದ್ದುಪಡಿಗಳನ್ನು ಮಾಡಬಹುದೇ? | ಬಳಕೆದಾರರ ಖಾತೆಗೆ ಲಾಗ್ ಇನ್ ಮಾಡುವ ಮೂಲಕ ಇದನ್ನು ಮಾಡಬಹುದು. ಈ ಬದಲಾವಣೆಗಳು ಅಭ್ಯರ್ಥಿಯು ತೆಗೆದುಕೊಳ್ಳುವ ಭವಿಷ್ಯದ ಪರೀಕ್ಷೆಗಳಿಗೆ ಅನ್ವಯಿಸುತ್ತವೆ. ಆದ್ದರಿಂದ ಅಭ್ಯರ್ಥಿಗಳು ಒಂದು–ಬಾರಿ ನೋಂದಣಿ ಸಮಯದಲ್ಲಿ ತಾವು ಈಗಾಗಲೇ ನಮೂದಿಸಿದ ಮೂಲ ಮಾಹಿತಿಯನ್ನು ಪರಿಶೀಲಿಸಿ ನಂತರ ಸಂಬಂಧಪಟ್ಟ ಪರೀಕ್ಷೆಗಾಗಿ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡಲು ಸೂಚಿಸಲಾಗಿದೆ. |

## 02. ಪರೀಕ್ಷೆಗಾಗಿ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಬಗ್ಗೆ:

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1 | ಆನ್‌ಲೈನ್ ಮೂಲಕ ಯಾವುದೇ ಪರೀಕ್ಷೆಗೆ ಅರ್ಜಿ ಸಲ್ಲಿಸುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು ಯಾವುವು? | ಅಭ್ಯರ್ಥಿಗಳು ಪರೀಕ್ಷೆಯ ಅಧಿಸೂಚನೆಯಲ್ಲಿ ನೀಡಲಾದ ಸೂಚನೆಗಳನ್ನು ಬಹಳ ಎಚ್ಚರಿಕೆಯಿಂದ ಗಮನ ಕೊಟ್ಟು ಓದಿ ಅನುಸರಿಸಬೇಕು.<br>ಅಭ್ಯರ್ಥಿಗಳು ತಮ್ಮ ಸ್ವಂತ ಹಿತಾಸಕ್ತಿಗೆ ಆನ್‌ಲೈನ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕದವರೆಗೆ ಕಾಯದೇ ಮೊದಲೇ ಸಲ್ಲಿಸಬೇಕು. ಕೊನೆಯ ದಿನಾಂಕ ಸಮೀಪಿಸಿದಂತೆ ಜಾಲತಾಣನಲ್ಲಿ ಹೆಚ್ಚಿನ ಹೊರೆಯ ಕಾರಣದಿಂದ ಸಂಪರ್ಕ ಕಡಿತ/ಅಸಾಮರ್ಥ್ಯ ಅಥವಾ ಎಸ್‌ಎಸ್‌ಸಿ ಜಾಲತಾಣಗೆ ಲಾಗಿನ್ ಆಗುವುದು ಕಷ್ಟವಾಗುವ ಸಾಧ್ಯತೆ ಇರುತ್ತದೆ.<br>ಅಭ್ಯರ್ಥಿಗಳು ತಮ್ಮ ಹೆಸರು, ಹುಟ್ಟಿದ ದಿನಾಂಕ, ತಂದೆ ಮತ್ತು ತಾಯಿ ಹೆಸರುಗಳು ಆನ್‌ಲೈನ್ ಅರ್ಜಿಯಲ್ಲಿ ತುಂಬಿರುವುದು ಮೆಟ್ರಿಕ್ಯುಲೇಷನ್ ಪ್ರಮಾಣಪತ್ರಗಳಲ್ಲಿ ಇರುವಂತೆಯೇ ಇದಯೇ ಎಂದು ಖಚಿತಪಡಿಸಿಕೊಳ್ಳಬೇಕು ಇಲ್ಲದಿದ್ದರೆ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಅಥವಾ ಅದು ಆಯೋಗದ ಗಮನಕ್ಕೆ ಬಂದಾಗ ಉಮೇದುವಾರಿಕೆಯನ್ನು ರದ್ದುಗೊಳಿಸಬಹುದು.<br>ಆನ್‌ಲೈನ್ ಅರ್ಜಿಯ ಸಮಯದಲ್ಲಿ ಅಧಿಸೂಚನೆಯಲ್ಲಿ ನಿರ್ದಿಷ್ಟವಾಗಿ ಸೂಚಿಸಿರುವ ಪ್ರಕಾರ ಸರಿಯಾದ ಸ್ಪಷ್ಟವಾಗಿ ಕಾಣಿಸುವ ಸಹಿಯನ್ನು ಅಪ್‌ಲೋಡ್ ಮಾಡಲಾಗಿರುವುದನ್ನು ಅಭ್ಯರ್ಥಿಗಳು ಖಚಿತಪಡಿಸಿಕೊಳ್ಳಬೇಕು. ಆನ್‌ಲೈನ್ ಅಪ್ಲಿಕೇಶನ್ ತುಂಬುವ ಸಮಯದಲ್ಲಿ ಭಾವಚಿತ್ರವನ್ನು ಸರಿಯಾಗಿ ತೆಗೆದುಕೊಳ್ಳಲಾಗಿದೆ ಮತ್ತು |

| | | |
|---|---|---|
| | | ಅಪ್‌ಲೋಡ್ ಮಾಡಲಾಗಿದೆ ಎಂದು ಖಚಿತಪಡಿಸಿಕೊಳ್ಳಬಹುದು. ಮಸುಕು/ಅಸ್ಪಷ್ಟ ಸಹಿಯೊಂದಿಗೆ ಅಪ್ಲಿಕೇಶನ್‌ಗಳು; ಕನ್ನಡಕ/ಟೋಪಿ ಹೊಂದಿರುವ ಛಾಯಾಚಿತ್ರಗಳು/ಮುಖಕ್ಕೆ ಹೆಚ್ಚು ಬಣ್ಣ ಬಳಸಿರುವ/ತೀರಾ ಸಮೀಪ/ತುಂಬಾ ಗಾಢವಾದ/ತುಂಬಾ ಚಿಕ್ಕ / ಮಸುಕಾಗಿ ಸ್ಪಷ್ಟವಲ್ಲದ/ವಿಪರೀತಮಾರ್ಪಡಿಸಿರುವ/ ಪಾರ್ಶ್ವಮುಖ ಮಾಡಿರುವ ಭಾವಚಿತ್ರ(ಫೋಟೋ)ಗಳನ್ನು ತಿರಸ್ಕರಿಸಲಾಗುತ್ತದೆ. ಸ್ವೀಕಾರಾರ್ಹ/ಸ್ವೀಕಾರಾರ್ಹವಲ್ಲದ ಛಾಯಾಚಿತ್ರಗಳ ಮಾದರಿಯನ್ನು ಸಾಮಾನ್ಯವಾಗಿ ಸಂಬಂಧಪಟ್ಟ ಪರೀಕ್ಷಾ ಸೂಚನೆ ಪತ್ರದಲ್ಲಿ ಉಲ್ಲೇಖಿಸಲಾಗುತ್ತದೆ ಮತ್ತು ಆದ್ದರಿಂದ ಮಾದರಿಗೆ ಅನುಗುಣವಾಗಿಲ್ಲದ ಛಾಯಾಚಿತ್ರಗಳನ್ನು ತಿರಸ್ಕರಿಸಬಹುದು. |
| 2 | ಈಗಾಗಲೇ ಸಲ್ಲಿಸಿರುವ ಆನ್ ಲೈನ್ ಅರ್ಜಿ ನಮೂನೆಯಲ್ಲಿ ಹೇಗೆ ತಿದ್ದುಪಡಿಯನ್ನು ಮಾಡಬಹುದು? | ಆನ್‌ಲೈನ್ ಅಪ್ಲಿಕೇಶನ್ ನಿಯತಾಂಕ(ಪ್ಯಾರಾಮೀಟರ್)ಗಳನ್ನು ಅಭ್ಯರ್ಥಿಯು ತೆರೆಯುವ ತಿದ್ದುಪಡಿ ಕಿಟಕಿ (ವಿಂಡೋ) ಮೂಲಕ ಅರ್ಜಿ ಸಲ್ಲಿಕೆ ಮುಕ್ತಾಯ ದಿನಾಂಕದ ನಂತರ ಸರಿಪಡಿಸಬಹುದು/ ಮಾರ್ಪಡಿಸಬಹುದು. |
| 3 | SSC ಯಿಂದ ಸೂಚಿಸಲಾದ ಎಲ್ಲಾ ಪರೀಕ್ಷೆಗಳಿಗೆ ತಿದ್ದುಪಡಿ ವಿಂಡೋ ಲಭ್ಯವಿದೆಯೇ? | ತಿದ್ದುಪಡಿ ವಿಂಡೋದ ಲಭ್ಯತೆಯನ್ನು ಪರೀಕ್ಷಾ ಸೂಚನೆಯಲ್ಲಿ ನಮೂದಿಸಲಾಗಿರುತ್ತದೆ. ಪರೀಕ್ಷಾ ಸೂಚನೆಯಲ್ಲಿ ಅಂತಹ ಯಾವುದೇ ಉಲ್ಲೇಖವನ್ನು ಮಾಡದಿದ್ದರೆ ಯಾವುದೇ ತಿದ್ದುಪಡಿ ವಿಂಡೋ ಇರುವುದಿಲ್ಲ. ಆದ್ದರಿಂದ, ಅಭ್ಯರ್ಥಿಗಳು ಅರ್ಜಿ ಪ್ರಕ್ರಿಯೆಯ ಭಾಗ–IIಗೆ ಮುಂದುವರಿಯುವ ಮೊದಲು ತಮ್ಮ ಮೂಲ ಮಾಹಿತಿಯನ್ನು ಪರಿಶೀಲಿಸಲು ಸೂಚಿಸಲಾಗಿದೆ. |
| 4 | ಈಗಾಗಲೇ ಸಲ್ಲಿಸಿರುವ ಆನ್‌ಲೈನ್ ಅರ್ಜಿ ನಮೂನೆಯಲ್ಲಿ ತಿದ್ದುಪಡಿಯನ್ನು, ತಿದ್ದುಪಡಿ ತೆರೆ(ವಿಂಡೋ) ಮುಗಿದ ನಂತರ ಹೇಗೆ ಮಾಡುವುದು? | ಸರಿಪಡಿಸಿದ ಅರ್ಜಿಯನ್ನು ಸಲ್ಲಿಸುವುದಕ್ಕೆ ಮುನ್ನ, ಅಭ್ಯರ್ಥಿಗಳು ನಮೂನೆಯ ಪ್ರತಿಯೊಂದು ಕ್ಷೇತ್ರದಲ್ಲಿ ಸರಿಯಾದ ವಿವರಗಳನ್ನು ಭರ್ತಿ ಮಾಡಲಾಗಿದೆಯೇ ಎಂದು ಪರಿಶೀಲಿಸಬೇಕು. 'ಅರ್ಜಿ ನಮೂನೆ ತಿದ್ದುಪಡಿಗಾಗಿ ವಿಂಡೋ' ಅವಧಿ ಮುಗಿದ ನಂತರ, ಯಾವುದೇ ಕಾರಣಕ್ಕೂ ಯಾವುದೇ ಬದಲಾವಣೆ/ತಿದ್ದುಪಡಿ/ಮಾರ್ಪಾಡುಗಳನ್ನು ಅನುಮತಿಸಲಾಗುವುದಿಲ್ಲ. ಅಂಚೆ, ಫ್ಯಾಕ್ಸ್, ಇಮೇಲ್, ಕೈಯಿಂದ, ಇತ್ಯಾದಿಗಳಂತಹ ಯಾವುದೇ ರೂಪದಲ್ಲಿ ಈ ನಿಟ್ಟಿನಲ್ಲಿ ಸ್ವೀಕರಿಸಿದ ವಿನಂತಿಗಳನ್ನು ಆಯೋಗವು ಪರಿಗಣಿಸುವುದಿಲ್ಲ. |
| 5 | ನಾನು ಪರೀಕ್ಷೆಗೆ ಅರ್ಜಿ ಸಲ್ಲಿಸಿದ್ದೇನೆ. ಆದರೆ, ಸ್ಥಿತಿಯನ್ನು 'ಅಪೂರ್ಣ' ಎಂದು ತೋರಿಸಲಾಗಿದೆ ಮತ್ತು ಅದನ್ನು 'ಅಪೂರ್ಣ ಅರ್ಜಿ' ಎಂದು ಅರ್ಜಿಯಲ್ಲಿ ಮುದ್ರಿಸಲಾಗುತ್ತದೆ. ಅದರ ಅರ್ಥವೇನು? | ಖಖಅ ಯಿಂದ ಶುಲ್ಕವನ್ನು ಸ್ವೀಕರಿಸಲಾಗಿಲ್ಲ ಎಂದು ಇದು ಸೂಚಿಸುತ್ತದೆ. ಅಭ್ಯರ್ಥಿಯ ಲಾಗಿನ್ ಪರದೆಯಲ್ಲಿ ಒದಗಿಸಲಾದ 'ಪಾವತಿ ಸ್ಥಿತಿ' ಲಿಂಕ್‌ನಲ್ಲಿ ಶುಲ್ಕ ಪಾವತಿಯ ಸ್ಥಿತಿಯನ್ನು ಪರಿಶೀಲಿಸಬಹುದು. ಶುಲ್ಕವನ್ನು ಸ್ವೀಕರಿಸದ ಕಾರಣ ಅಪೂರ್ಣವಾಗಿ ಉಳಿಯುವ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. |

| | | |
|---|---|---|
| 6 | ನಾನು ಪರೀಕ್ಷೆಗೆ ಯಶಸ್ವಿಯಾಗಿ ಅರ್ಜಿ ಸಲ್ಲಿಸಿದ್ದೇನೆ. ಆದರೆ, 'ಅರ್ಜಿ ಸ್ವೀಕರಿಸಿದ ವಿಷಯಗಳನ್ನು ಪರಿಶೀಲಿಸಲಾಗಿಲ್ಲ' ಎಂದು ಅರ್ಜಿಯಲ್ಲಿ ಮುದ್ರಿಸಲಾಗುತ್ತದೆ. ನನ್ನ ಅರ್ಜಿಯನ್ನು ಸ್ವೀಕರಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನಾನು ಹೇಗೆ ತಿಳಿಯಬಹುದು? | ಅರ್ಜಿಯನ್ನು ಯಶಸ್ವಿಯಾಗಿ ಸಲ್ಲಿಸಿದಾಗ, ಅದನ್ನು 'ತಾತ್ಕಾಲಿಕವಾಗಿ' ಸ್ವೀಕರಿಸಲಾಗುತ್ತದೆ ಮತ್ತು ಅರ್ಜಿಯ ಸ್ಥಿತಿಯನ್ನು 'ಅರ್ಜಿ ಸ್ವೀಕರಿಸಲಾಗಿದೆ (ವಿಷಯಗಳನ್ನು ಪರಿಶೀಲಿಸಲಾಗಿಲ್ಲ)' ಎಂದು ಸೂಚಿಸಲಾಗುತ್ತದೆ. ಅಭ್ಯರ್ಥಿಗಳು ತಮ್ಮ ಸ್ವಂತ ದಾಖಲೆಗಳಿಗಾಗಿ ತಾವು ಸಲ್ಲಿಸಿದ ಆನ್‌ಲೈನ್ ಅರ್ಜಿ ಕಾಪಿಯ ಮುದ್ರಣವನ್ನು ತೆಗೆದುಕೊಳ್ಳಬೇಕು.<br>ಆನಂತರ, ಅರ್ಜಿಯ ಸ್ಥಿತಿಯನ್ನು ಪರೀಕ್ಷಾ ದಿನಾಂಕದ ಕೆಲವು ದಿನಗಳ ಮೊದಲು ಸಂಬಂಧಪಟ್ಟ ಪ್ರಾದೇಶಿಕ ಕಚೇರಿಯ ಜಾಲತಾಣನಲ್ಲಿ ಪ್ರಕಟಿಸಲಾಗುತ್ತದೆ. ಆದ್ದರಿಂದ, ಅಭ್ಯರ್ಥಿಗಳು ಪರೀಕ್ಷೆಯ ಬಗ್ಗೆ ನವೀಕರಣಗಳು ಮತ್ತು ಮಾಹಿತಿಗಾಗಿ ನಿಯಮಿತವಾಗಿ ಸಂಬಂಧಪಟ್ಟ ಪ್ರಾದೇಶಿಕ ಕಚೇರಿ ಮತ್ತು SSC HQನ ಜಾಲತಾಣಗೆ ಭೇಟಿ ನೀಡುವಂತೆ ಸೂಚಿಸಲಾಗಿದೆ. |
| 7 | ಯಶಸ್ವಿಯಾಗಿ ಸಲ್ಲಿಸಿದ ಅರ್ಜಿಗಳನ್ನು ನಂತರದ ಹಂತದಲ್ಲಿ ಯಾವುದೇ ಕಾರಣಕ್ಕಾದರೂ ತಿರಸ್ಕರಿಸಲಾಗುತ್ತದೆಯೇ? ಯಾವುದೇ ಕಾರಣಕ್ಕಾದರೂ ನನ್ನ ಅರ್ಜಿಯನ್ನು ತಿರಸ್ಕರಿಸಿದರೆ ನಾನು ಹೇಗೆ ತಿಳಿಯಬಹುದು? | ಹೌದು. ನಕಲಿ, ಅಪೂರ್ಣವಾಗಿರುವ ಆನ್‌ಲೈನ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅಸ್ಪಷ್ಟ ವಿವರ/ಅಸ್ಪಷ್ಟ ಸಹಿಯನ್ನು ಹೊಂದಿರುವ ಅರ್ಜಿಗಳು; ಪರೀಕ್ಷೆಯ ಸೂಚನೆಯಲ್ಲಿ ಉಲ್ಲೇಖಿಸಲಾದ ಮಾದರಿ ಭಾವಚಿತ್ರಗಳಿಗೆ ಅನುಗುಣವಾಗಿಲ್ಲದ ಭಾವಚಿತ್ರಗಳೊಂದಿಗಿನ ಅರ್ಜಿಗಳನ್ನು ತಿರಸ್ಕರಿಸಲಾಗುವುದು.<br>ಪರೀಕ್ಷೆಯ ದಿನಾಂಕದ ಕೆಲವು ದಿನಗಳ ಮೊದಲು SSC(HQ)/ಸಂಬಂಧಿತ ಪ್ರಾದೇಶಿಕ ಕಚೇರಿಯ ಜಾಲತಾಣದಲ್ಲಿ ಅರ್ಜಿಯ ಸ್ಥಿತಿಯನ್ನು ಪ್ರಕಟಿಸಲಾಗುತ್ತದೆ. ಆದ್ದರಿಂದ ಅಭ್ಯರ್ಥಿಗಳು ಪರೀಕ್ಷೆಯ ಬಗ್ಗೆ ನವೀಕರಣಗಳು ಮತ್ತು ಮಾಹಿತಿಗಾಗಿ ನಿಯಮಿತವಾಗಿ ಸಂಬಂಧಪಟ್ಟ ಪ್ರಾದೇಶಿಕ ಕಚೇರಿ ಮತ್ತು SSC ಊಕಿನ ಜಾಲತಾಣಗೆ ಭೇಟಿ ನೀಡುವಂತೆ ಸೂಚಿಸಲಾಗಿದೆ. ಪರೀಕ್ಷಾ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಇತರ ಕಾರಣಗಳಿಗಾಗಿಯೂ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. |
| 8 | ಅಭ್ಯರ್ಥಿಯು ಆನ್‌ಲೈನ್ ಅರ್ಜಿಗಳನ್ನು ಭರ್ತಿ ಮಾಡುವಾಗ ಯಾವುದೇ ತಾಂತ್ರಿಕ ಸಮಸ್ಯೆಗಳನ್ನು/ಪಾವತಿ ಸಮಸ್ಯೆಗಳನ್ನು ಎದುರಿಸುತ್ತಿದ್ದರೆ ಏನು ಮಾಡಬೇಕು? | ಸಂಬಂಧಿಸಿದ ಪ್ರಾದೇಶಿಕ ಕಛೇರಿಯನ್ನು ಇಮೇಲ್ ಮೂಲಕ ಸಂಪರ್ಕಿಸಿ, ದೋಷ ಸಂದೇಶದ ಸ್ಕ್ರೀನ್‌ಶಾಟ್‌ಗಳು/ಪಾವತಿ ಸ್ಥಿತಿಯ ಸ್ಕ್ರೀನ್‌ಶಾಟ್‌ಗಳಂತಹ ಎಲ್ಲಾ ಅಗತ್ಯ ವಿವರಗಳನ್ನು ಒದಗಿಸಿ ಮನವಿ ಸಲ್ಲಿಸಿ. ಪರ್ಯಾಯವಾಗಿ, ನೀವು SSC ಯನ್ನು ಸಂಪರ್ಕಿಸಬಹುದು. ಶುಲ್ಕ ರಹಿತ ಸಂಖ್ಯೆ **1800 309 3063** ಮೂಲಕ (ಬೆಳಗ್ಗೆ 09–30 ರಿಂದ ಸಂಜೆ 06–00 ಸೋಮವಾರ ದಿಂದ ಶುಕ್ರವಾರದವರೆಗೆ). |

**03. ಅರ್ಜಿಯ ಸ್ಥಿತಿ, ಪರೀಕ್ಷಾ ಕೇಂದ್ರದ ಸ್ಥಿತಿ, ಪ್ರವೇಶ ಪತ್ರಗಳು, ಪರೀಕ್ಷಾ ಸ್ಥಳಗಳು ಇತ್ಯಾದಿಗಳಿಗೆ ಸಂಬಂಧಿಸಿದ ವಿಚಾರಣೆ**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1 | ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸಿದ ನಂತರ, ಅಭ್ಯರ್ಥಿಯು ನೇಮಕಾತಿ ಪ್ರಕ್ರಿಯೆಯ ಕುರಿತು ಹೆಚ್ಚಿನ ಪರಿಷ್ಕರಣಗಳನ್ನು ಹೇಗೆ ತಿಳಿಯಬಹುದು? | ಅಭ್ಯರ್ಥಿಗಳಿಗೆ ವೇಳಾಪಟ್ಟಿ ಮತ್ತು ನಗರ/ಪರೀಕ್ಷಾ ಕೇಂದ್ರವನ್ನು ಸೂಚಿಸುವ ಪರೀಕ್ಷೆಯ ಮಾಹಿತಿಯನ್ನು ಪರೀಕ್ಷೆಯ ದಿನಾಂಕಕ್ಕಿಂತ ಎರಡು ವಾರಗಳ ಮೊದಲು ಆಯೋಗದ ಸಂಬಂಧಿತ ಪ್ರಾದೇಶಿಕ/ಉಪ–ಪ್ರಾದೇಶಿಕ ಕಚೇರಿಯ ಜಾಲತಾಣಗಳಲ್ಲಿ ಪ್ರಕಟಿಸಲಾಗುತ್ತದೆ. ಯಾವುದೇ ಅಭ್ಯರ್ಥಿಯು ಆಯೋಗದ ಜಾಲತಾಣದಲ್ಲಿ ತನ್ನ ವಿವರಗಳನ್ನು ಕಾಣದಿದ್ದರೆ, ಪರೀಕ್ಷೆಯ ದಿನಾಂಕದ ಒಂದು ವಾರದ ಮೊದಲು, ಅವನು/ಅವಳು ತಕ್ಷಣವೇ ಅರ್ಜಿಸಲ್ಲಿಸಿದ ಪುರಾವೆಯೊಂದಿಗೆ ಆಯೋಗದ ಸಂಬಂಧಿತ ಪ್ರಾದೇಶಿಕ/ಉಪ–ಪ್ರಾದೇಶಿಕ ಕಚೇರಿಯನ್ನು ಸಂಪರ್ಕಿಸಬೇಕು. |
| 2 | 'ಕಮಿಷನ್‌ನ ಸಂಬಂಧಪಟ್ಟ ಪ್ರಾದೇಶಿಕ/ಉಪ–ಪ್ರಾದೇಶಿಕ ಕಛೇರಿ' ಎಂದರೇನು? (ಅರ್ಜಿಯ ಸ್ಥಿತಿ, ಪರೀಕ್ಷಾ ಕೇಂದ್ರದ ಸ್ಥಿತಿ, ಪ್ರವೇಶ ಪತ್ರಗಳು, ಪರೀಕ್ಷಾ ಸ್ಥಳಗಳು ಇತ್ಯಾದಿಗಳಿಗೆ ಸಂಬಂಧಿಸಿದ ವಿವರಗಳಿಗೆ ಸಂಪರ್ಕಿಸಬೇಕಾದಲ್ಲಿ) | ಅಭ್ಯರ್ಥಿಯು ತಾನು ಪರೀಕ್ಷೆಯನ್ನು ತೆಗೆದುಕೊಳ್ಳಲು ಬಯಸುವ ಕೇಂದ್ರ(ಗಳನ್ನು) ಆನ್‌ಲೈನ್ ಅರ್ಜಿ ನಮೂನೆಯಲ್ಲಿ ಸೂಚಿಸಬೇಕು. ಪರೀಕ್ಷಾ ಕೇಂದ್ರಗಳು ಮತ್ತು ಪ್ರಾದೇಶಿಕ ಕಛೇರಿಗಳು ಎಲ್ಲಿವೆ ಕುರಿತು ವಿವರಗಳನ್ನು ನೇಮಕಾತಿ ಅಧಿಸೂಚನೆ ಯಲ್ಲಿ ಕಾಣಬಹುದು. ಅದರಂತೆ, ಸಂಬಂಧಿತ ಪ್ರಾದೇಶಿಕ ಕಚೇರಿಯನ್ನು ಸಂಪರ್ಕಿಸಬಹುದು.<br>ಹೀಗೆ, ಅಭ್ಯರ್ಥಿಯು ಆಯ್ಕೆ ಮಾಡಿದ ಪರೀಕ್ಷಾ ಕೇಂದ್ರಗಳು ಲಕ್ಷದ್ವೀಪ, ಕರ್ನಾಟಕ ಮತ್ತು ಕೇರಳದಲ್ಲಿ ನೆಲೆಗೊಂಡಿದ್ದರೆ ಕೆಳಗಿನ ಕಚೇರಿಯನ್ನು ಸಂಪರ್ಕಿಸಬಹುದು.<br>ಪ್ರಾದೇಶಿಕ ನಿರ್ದೇಶಕರು (ಕೆಕೆಆರ್),<br>ಸಿಬ್ಬಂದಿ ಆಯ್ಕೆ ಆಯೋಗ, 1 ನೇ ಮಹಡಿ, 'ಇ' ವಿಂಗ್, ಕೇಂದ್ರೀಯ ಸದನ್, ಕೋರಮಂಗಲ, ಬೆಂಗಳೂರು, ಕರ್ನಾಟಕ–560034 (enquiry.ssckkr@gmail.com)<br>ಸಹಾಯವಾಣಿ ಸಂಖ್ಯೆ 080–25502520 |
| 3 | ಆನ್‌ಲೈನ್ ಅರ್ಜಿಯ ಸ್ಥಿತಿಯನ್ನು ಸಂಬಂಧಿತ ಪ್ರಾದೇಶಿಕ ಕಚೇರಿಯ ಜಾಲತಾಣದಲ್ಲಿ ಪ್ರಕಟಿಸಿದ ನಂತರ, ನೇಮಕಾತಿ ಪ್ರಕ್ರಿಯೆ ಯಲ್ಲಿ ಮುಂದಿನ ಹಂತ ಏನು? | ಸಂಬಂಧಿಸಿದ ಪ್ರಾದೇಶಿಕ ಕಚೇರಿಯು ತನ್ನ ಜಾಲತಾಣನಲ್ಲಿ "ಪರೀಕ್ಷಾ ಕೇಂದ್ರ/ ದಿನಾಂಕ ಸ್ಥಿತಿ"ಯನ್ನು ಪ್ರಕಟಿಸುತ್ತದೆ, ಅದನ್ನು ಗಮನಿಸಿ ಅಭ್ಯರ್ಥಿಯು ತನಗೆ ಮಂಜೂರು ಮಾಡಲಾಗಿರುವ ನಗರ ಮತ್ತು ದಿನಾಂಕವನ್ನು ತಿಳಿದುಕೊಳ್ಳಬಹುದು. ಅರ್ಜಿಯು ಸ್ವೀಕೃತವಾಗಿರುವ ಅಭ್ಯರ್ಥಿಗಳು ಮಾತ್ರ ಈ ವಿವರಗಳನ್ನು ಪರಿಶೀಲಿಸಲು ಸಾಧ್ಯವಾಗುತ್ತದೆ. ಈ ಹಂತದಲ್ಲಿ ನಿಮ್ಮ ವಿವರಗಳು ಲಭ್ಯವಿಲ್ಲದಿದ್ದರೆ, ನಿಮ್ಮ ಅರ್ಜಿಯನ್ನು ಸ್ವೀಕರಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನೀವು ಆಯ್ಕೆ ಮಾಡಿದ ಪರೀಕ್ಷಾ ಕೇಂದ್ರಗಳು ಲಕ್ಷದ್ವೀಪ, ಕರ್ನಾಟಕ ಮತ್ತು ಕೇರಳದಲ್ಲಿದ್ದರೆ www.ssckkr.kar.nic.inಗೆ |

| | | |
|---|---|---|
| | | ಭೇಟಿ<br>ನೀಡಿ ಅರ್ಜಿಯ ಸ್ಥಿತಿ ಮತ್ತು ಪರೀಕ್ಷಾ ಕೇಂದ್ರ/ದಿನಾಂಕಗಳನ್ನು ತಿಳಿಯಬಹುದು. |
| 4 | ಪರೀಕ್ಷಾ ಕೇಂದ್ರವನ್ನು ನಿಯೋಜಿಸುವ ಪ್ರಕ್ರಿಯೆ ಹೇಗೆ? | ಅಭ್ಯರ್ಥಿಯು ಒಂದೇ ಪ್ರದೇಶದೊಳಗೆ ಆದ್ಯತೆಯ ಕ್ರಮದಲ್ಲಿ ಮೂರು ಕೇಂದ್ರಗಳಿಗೆ ಆಯ್ಕೆಯನ್ನು ನೀಡಬೇಕು. ಯಾವುದೇ ಸಂದರ್ಭದಲ್ಲೂ ಕೇಂದ್ರದಬದಲಾವಣೆಯ ಮನವಿಯನ್ನು ನಂತರ ಪರಿಗಣಿಸಲಾಗುವುದಿಲ್ಲ ಆದ್ದರಿಂದ, ಅಭ್ಯರ್ಥಿಗಳು ಕೇಂದ್ರಗಳನ್ನು ಎಚ್ಚರಿಕೆಯಿಂದ ಆಯ್ಕೆ ಮಾಡಬೇಕು ಮತ್ತು ಅದನ್ನು ಅರ್ಜಿಗಳಲ್ಲಿ ಸರಿಯಾಗಿ ಉಲ್ಲೇಖಿಸಬೇಕು.<br>ಆಯೋಗವು ಅಭ್ಯರ್ಥಿಗಳಿಗೆ ಅವರು ಆಯ್ಕೆ ಮಾಡಿದ ಕೇಂದ್ರಗಳಲ್ಲಿ ಅವಕಾಶ ಕಲ್ಪಿಸಲು ಪ್ರಯತ್ನಿಸುತ್ತದೆ. ಆಯೋಗವು ಯಾವುದೇ ಕೇಂದ್ರವನ್ನು ರದ್ದುಗೊಳಿಸುವ ಮತ್ತು ಆ ಕೇಂದ್ರದ ಅಭ್ಯರ್ಥಿಗಳನ್ನು ಮತ್ತೊಂದು ಕೇಂದ್ರದಿಂದ ಹಾಜರಾಗುವಂತೆ ಸೂಚಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಹಾಗೇ ಯಾವುದೇ ಕೇಂದ್ರದ ಅಭ್ಯರ್ಥಿಗಳನ್ನು ಪರೀಕ್ಷೆ ತೆಗೆದುಕೊಳ್ಳಲು ಬೇರೆ ಯಾವುದಾದರೂ ಕೇಂದ್ರಕ್ಕೆ ಕಳುಹಿಸುವ ಹಕ್ಕನ್ನು ಆಯೋಗವು ಕಾಯ್ದಿರಿಸಿಕೊಂಡಿದೆ. |
| 5 | ಅಭ್ಯರ್ಥಿಗೆ ನಿಗದಿಪಡಿಸಲಾದ ಪರೀಕ್ಷಾ ಕೇಂದ್ರ (ಅಥವಾ) ಪರೀಕ್ಷಾ ದಿನಾಂಕವನ್ನು ಹೇಗೆ ಬದಲಾಯಿಸುವುದು? | ಆಯೋಗದ ನೀತಿಯ ಪ್ರಕಾರ, ಪರೀಕ್ಷಾಕೇಂದ್ರ/ಪರೀಕ್ಷಾ ದಿನಾಂಕವು ಸಿಬ್ಬಂದಿ ಆಯ್ಕೆ ಆಯೋಗದ ಇತರ ಪರೀಕ್ಷೆಗಳು ಒಂದೇ ದಿನ ಒಟ್ಟಿಗೆ ಇದ್ದರೆ ಮಾತ್ರ ಬದಲಾಯಿಸುತ್ತದೆ. ಅದನ್ನು ಹೊರತು, ಬೇರೇ ಸಂದರ್ಭಗಳಲ್ಲಿ ಬದಲಾಯಿಸಲಾಗುವುದಿಲ್ಲ.<br>ಆದ್ದರಿಂದ, ಪರೀಕ್ಷಾ ಕೇಂದ್ರ/ಪರೀಕ್ಷಾ ದಿನಾಂಕ ಬದಲಾವಣೆ ವಿನಂತಿಗಳನ್ನು ಅವರ ವೈಯಕ್ತಿಕ ಕಾರಣಗಳು/ಅವರ ಶೈಕ್ಷಣಿಕ ಕಾರಣಗಳ ಆಧಾರದ ಮೇಲೆ (ಅಂದರೆ ಸೆಮಿಸ್ಟರ್/ ವಾರ್ಷಿಕ ಪರೀಕ್ಷೆಯ ಕಾರಣದಿಂದಾಗಿ) ಆಯೋಗವು ಪರಿಗಣಿಸುವುದಿಲ್ಲ. |
| 6 | ಪ್ರವೇಶ ಪತ್ರವನ್ನು ಹೇಗೆ ಮತ್ತು ಯಾವಾಗ ನೀಡಲಾಗುತ್ತದೆ? | ಪರೀಕ್ಷೆಗೆ 3–7 ದಿನಗಳ ಮೊದಲು ಸಂಬಂಧಪಟ್ಟ ಪ್ರಾದೇಶಿಕ ಕಚೇರಿಯ ಜಾಲತಾಣನಲ್ಲಿ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡುವ ಸೌಲಭ್ಯ ಲಭ್ಯವಿರುತ್ತದೆ. ಅಭ್ಯರ್ಥಿಯು ಪ್ರವೇಶ ಪ್ರಮಾಣಪತ್ರದ ಮುದ್ರಣವನ್ನು ಪರೀಕ್ಷಾ ಕೊಠಡಿಗೆ ತರಬೇಕು. ಪ್ರವೇಶ ಪತ್ರವನ್ನು ಅಂಚೆ ಮೂಲಕ ಕಳುಹಿಸಲಾಗುವುದಿಲ್ಲ. |
| 7 | ಸಂಬಂಧಪಟ್ಟ ಪ್ರಾದೇಶಿಕ ಕಛೇರಿ ಜಾಲತಾಣದಲ್ಲಿ ಪ್ರವೇಶ ಪತ್ರಗಳು ಲಭ್ಯವಾಗಿವೆ ಎಂದು ಹೇಗೆ ತಿಳಿಯುವುದು? | ಅಪ್ ಡೇಟ್ಸ್ ಮತ್ತು ಪರೀಕ್ಷೆಯ ಬಗ್ಗೆ ಮಾಹಿತಿಗಾಗಿ ಅಭ್ಯರ್ಥಿಗಳು ನಿಯಮಿತವಾಗಿ ಸಂಬಂಧಪಟ್ಟ ಪ್ರಾದೇಶಿಕ ಕಛೇರಿ ಮತ್ತು SSC HQ ಜಾಲತಾಣಗಳಿಗೆ ಭೇಟಿ ನೀಡುವಂತೆ ಸೂಚಿಸಲಾಗಿದೆ.<br>ಆಯೋಗವು ತನ್ನ ಪ್ರಾದೇಶಿಕ ಕಚೇರಿಗಳ ಜಾಲತಾಣಗಳಲ್ಲಿ ಪ್ರವೇಶ ಪ್ರಮಾಣ ಪತ್ರಗಳನ್ನು ಅಪ್‌ಲೋಡ್ ಮಾಡುವ ಬಗ್ಗೆ ಇಮೇಲ್/ಎಸ್‌ಎಂಎಸ್ ಮೂಲಕ ಅಭ್ಯರ್ಥಿಗಳಿಗೆ ತಿಳಿಸುತ್ತದೆ. |

| | | |
|---|---|---|
| 8 | ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡುವುದು ಹೇಗೆ? | ಸಂಬಂಧಪಟ್ಟ ಪ್ರಾದೇಶಿಕ ಕಚೇರಿ ಒದಗಿಸಿದ ಲಿಂಕ್‌ನಲ್ಲಿ ನಿಮ್ಮ ನೋಂದಣಿ ಸಂಖ್ಯೆ ಮತ್ತು ಜನ್ಮ ದಿನಾಂಕವನ್ನು ನಮೂದಿಸುವ ಮೂಲಕ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಬಹುದು. |
| 9 | ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಲು ಸಾಧ್ಯ ವಾಗದಿದ್ದರೆ ಏನು ಮಾಡಬೇಕು? | ಅಭ್ಯರ್ಥಿಯು ಪ್ರವೇಶ ಪ್ರಮಾಣಪತ್ರವನ್ನು ಡೌನ್‌ಲೋಡ್ ಮಾಡಲು ಸಾಧ್ಯ ವಾಗದಿದ್ದರೆ, ಪ್ರಾದೇಶಿಕ ಕಚೇರಿಯನ್ನು ದೂರವಾಣಿ ಮೂಲಕ, ವೈಯಕ್ತಿಕ ವಾಗಿ ಅಥವಾ ಇ-ಮೇಲ್ ಮೂಲಕ ಅಗತ್ಯ ವಿವರಗಳನ್ನು ಒದಗಿಸುವ ಮೂಲಕ ಅಂದರೆ ಅರ್ಜಿ ನಮೂನೆಯ ಪ್ರತಿಯನ್ನು ನೀಡಿ ಸಂಪರ್ಕಿಸಬಹುದು. enquiry.ssckkr@gmail.com ಸಹಾಯವಾಣಿ ಸಂಖ್ಯೆ 080-25502520 |
| 10 | ಪ್ರವೇಶ ಪತ್ರದೊಂದಿಗೆ ಜೊತೆಯಲ್ಲಿ ಕೊಂಡೊಯ್ಯಬೇಕಾದ ದಾಖಲೆಗಳು ಯಾವುವು ಮತ್ತು ಪರೀಕ್ಷಾ ಕಾರ್ಯ ವಿಧಾನಗಳು, ಸಮಯ ಇತ್ಯಾದಿಗಳಿಗೆ ಸಂಬಂಧಿಸಿದ ಇತರ ಸೂಚನೆ ಗಳನ್ನು ಎಲ್ಲಿ ನೋಡಬಹುದು? | ಪ್ರವೇಶ ಪತ್ರದೊಂದಿಗೆ ಕೊಂಡೊಯ್ಯಬೇಕಾದ ದಾಖಲೆಗಳು ಮತ್ತು ಪರೀಕ್ಷಾ ವಿಧಾನಗಳು, ಸಮಯ ಇತ್ಯಾದಿಗಳಿಗೆ ಸಂಬಂಧಿಸಿದ ಸೂಚನೆಗಳನ್ನು ಪ್ರವೇಶ ಪತ್ರದೊಂದಿಗೆ ಕೊಡಲಾಗಿರುತ್ತದೆ. |
| 11 | ನಾನು ಆನ್‌ಲೈನ್ ಅರ್ಜಿ ಯಶಸ್ವಿಯಾಗಿ ಸಲ್ಲಿಸಿದ್ದೇನೆ ಆದರೆ ಅರ್ಜಿಯ ಸ್ಥಿತಿ ಅಥವಾ ಪ್ರವೇಶ ಪತ್ರ ಇತ್ಯಾದಿಗಳಲ್ಲಿ ನನ್ನ ವಿವರ ಇಲ್ಲ. ನಾನು ಏನು ಮಾಡಬೇಕು? | ಯಾವುದೇ ಅಭ್ಯರ್ಥಿಯು ಆಯೋಗದ ಜಾಲತಾಣದಲ್ಲಿ ತನ್ನ ವಿವರಗಳು ಕಾಣದಿದ್ದರೆ, ಪರೀಕ್ಷೆಯ ದಿನಾಂಕದ ಒಂದು ವಾರದ ಮೊದಲು, ಅಭ್ಯರ್ಥಿಯು ತಕ್ಷಣ ತನ್ನ ಅರ್ಜಿಯನ್ನು ಸಲ್ಲಿಸಿದ ಪುರಾವೆಯೊಂದಿಗೆ ಆಯೋಗದ ಪ್ರಾದೇಶಿಕ ಕಚೇರಿಯನ್ನು ಸಂಪರ್ಕಿಸಬೇಕು. ಹಾಗೆ ಮಾಡಲು ವಿಫಲವಾದರೆ ಪರೀಕ್ಷೆಗೆ ಪರಿಗಣಿಸಲು ಕೇಳುವ ಯಾವುದೇ ಹಕ್ಕು ಇರುವುದಿಲ್ಲ. |
| 12 | ಯಾವುದೇ ವಿಷಯದ ಬಗ್ಗೆ ಆಯೋಗ/ಪ್ರಾದೇಶಿಕ ಕಛೇರಿ<br><br>ಯೊಂದಿಗೆ ಪತ್ರ ವ್ಯವಹಾರವನ್ನು ನಡೆಸುವುದು ಹೇಗೆ? | ಆಯೋಗ/ಪ್ರಾದೇಶಿಕ ಕಚೇರಿಗೆ ಯಾವುದೇ ಸಂವಹನವನ್ನು ನಡೆಸುವಾಗ ಅಭ್ಯರ್ಥಿಯು ನೋಂದಣಿ ಸಂಖ್ಯೆ, ನೋಂದಾಯಿತ ಈ-ಮೇಲ್-ಐಡಿ ಮತ್ತು ಮೊಬೈಲ್ ಸಂಖ್ಯೆಯನ್ನು ಹೆಸರು, ಹುಟ್ಟಿದ ದಿನಾಂಕ ಮತ್ತು ಪರೀಕ್ಷೆಯ ಹೆಸರಿನೊಂದಿಗೆ ಬರೆಯಬೇಕು. ಈ ವಿವರಗಳನ್ನು ಒದಗಿಸದ ಅಭ್ಯರ್ಥಿಯ ಸಂವಹನವನ್ನು ಪರಿಗಣಿಸಲಾಗುವುದಿಲ್ಲ. ಮೇಲಿನ ಕ್ರಮ ಸಂಖ್ಯೆ 02ರಲ್ಲಿ ತಿಳಿಸಿರುವಂತೆ, ಅಭ್ಯರ್ಥಿಯು ಆಯ್ಕೆ ಮಾಡಿಕೊಂಡ ಪರೀಕ್ಷಾ ಕೇಂದ್ರಗಳು ಲಕ್ಷದ್ವೀಪ, ಕರ್ನಾಟಕ ಮತ್ತು ಕೇರಳದಲ್ಲಿದ್ದರೆ ಕೆಳಗಿನ ಕಚೇರಿಯನ್ನು ಸಂಪರ್ಕಿಸ ಬಹುದು ಪ್ರಾದೇಶಿಕ ನಿರ್ದೇಶಕರು (ಕೆಕೆಆರ್), ಸಿಬ್ಬಂದಿ ಆಯ್ಕೆ ಆಯೋಗ, 1ನೇ ಮಹಡಿ, 'ಇ' ವಿಂಗ್, ಕೇಂದ್ರೀಯ ಸದನ, ಕೋರಮಂಗಲ,ಬೆಂಗಳೂರು, ಕರ್ನಾಟಕ-560034 (enquiry.ssckkr@gmail.com) |